**ಶಾಸನ ರಚನಾ ಕಾರ್ಯಕಲಾಪಗಳು**

**ವಿಧೇಯಕವನ್ನು ಮಂಡಿಸುವುದು**

**ಎ.ಕರ್ನಾಟಕ ಧನ ವಿನಿಯೋಗ ವಿಧೇಯಕ 1992**

**ಮಂಡನೆಗೆ ಅನುಮತಿ ಕೋರಿಕೆ**

ಶ್ರೀ ಎಂ. ವೀರಪ್ಪ ಮೊಯಿಲಿ(ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಪರವಾಗಿ 1992ನೇ ಸಾಲಿನ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷಿಣಿಯವರು:- ಪ್ರಸ್ತಾವ ಏನೆಂದರೆ: "1992ನೇ ಸಾಲಿನ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೇ, 1992ನೇ ಸಾಲಿನ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷಿಣಿಯವರು:- ವಿಧೇಯಕವನ್ನುಮಂಡಿಸಲಾಗಿದೆ.

**ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳು(ತಿದ್ದುಪಡಿ) ವಿಧೇಯಕ 1992**

ಶ್ರೀ ಎಂ. ವೀರಪ್ಪ ಮೊಯಿಲಿ(ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು:-, ಮಾನ್ಯ ಉಪಾಧ್ಯಕ್ಷರೇ, 1992ನೇ ಸಾಲಿನ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳು(ತಿದ್ದುಪಡಿ) ವಿಧೇಯಕನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷಿಣಿಯವರು:- ಪ್ರಸ್ತಾವ ಏನೆಂದರೆ: "1992ನೇ ಸಾಲಿನ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳು(ತಿದ್ದುಪಡಿ) ವಿಧೇಯಕನ್ನು ಮಂಡಿಸಲು ಅನುಮತಿ ನೀಡುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಉಪಾಧ್ಯಕ್ಷರೇ, 1992ನೇ ಸಾಲಿನ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳು(ತಿದ್ದುಪಡಿ) ವಿಧೇಯಕನ್ನು ಸಭೆಯ ಮುಂದೆ ಮಂಡಿತ್ತೇನೆ.

ಉಪಾಧ್ಯಕ್ಷಿಣಿಯವರು:-ಅನುಬಂಧ-II ವಿಧೇಯಕವನ್ನುಮಂಡಿಸಲಾಗಿದೆ.

**ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

(ಈ ಹಂತದಲ್ಲಿ ಮಾನ್ಯ ಜನತಾ ದಳದ ಸದಸ್ಯರು ಸಭೆಗೆ ಆಗಮಿಸಿದರು)

ಶ್ರೀ ಎಂ. ವೀರಪ್ಪ ಮೊಯಿಲಿ:- ವೆಲ್‌ಕಂ ವೆಲ್‌ಕಂ

ಶ್ರೀ ಡಿ. ಬಿ. ಚಂದ್ರೇಗೌಡ( ವಿರೋಧ ಪಕ್ಷದ ನಾಯಕರು):- ಯಾವ ವಿಧೇಯಕವನ್ನು ಮಂಡಿಸಬೇಕೆಂದಿದ್ದೀರಿ?

ಉಪಾಧ್ಯಕ್ಷಿಣಿಯವರು:- ಕರ್ನಾಟಕ ಧನ ವಿಧೇಯಕ 1992

**ಕರ್ನಾಟಕ ಧನ ವಿಧೇಯಕ 1992**

**ಪರ್ಯಾಲೋಚನಾ ಪ್ರಸ್ತಾವ**